ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂಖ್ಯೆ.ಕರಾಸಾ/ಕೇಕ/ಆಡಳಿತ/ಎ1-04 / 723 /2020-21 ದಿನಾಂಕ:06-02-2021

## ಸುತ್ತೋಲೆ ಸಂಖ್ಯೆ :1685

ವಿಷಯ: ಕೊರೋನಾ ವೈರಸ್ (ಕೋವಿಡ್-19) ಲಾಕ್‌ಡೌನ್ ಅವಧಿಯ ಹಾಜರಾತಿಯ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ:ಆಕುಕ/54/ಸಿಜಿಎಂ/2020 ದಿನಾಂಕ: 23-03-2020

2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 123 ಡಿಜಿಎಂ 2020 ದಿನಾಂಕ:23-03-2020, ದಿನಾಂಕ:30-03-2020 ದಿನಾಂಕ: 15-04-2020 ಮತ್ತು ಸಂಖ್ಯೆ:ಸಿಆಸುಇ 123 ಡಿಜಿಎಂ 2020(ಭಾಗ) ದಿನಾಂಕ:02-05-2020.
3. ಕರಾಸಾ/ಕೇಕ/ಆಡಳಿತ/10/2020-21 ದಿನಾಂಕ: 08-05-2020
4. ಕರಾಸಾ/ಕೇಕ/ಆಡಳಿತ/17/2020-21 ದಿನಾಂಕ:11-05-2020
5. ಪತ್ರ ಸಂಖ್ಯೆ: ಟಿಡಿ 10 ಟಿಸಿಎಸ್ 2020 ದಿನಾಂಕ: 24-06-2020
6. ಸರ್ಕಾರದ ಆದೇಶ ಸಂಖ್ಯೆ:ಕಂಇ 157 ಟಿಎನ್‌ಆರ್ 2020, ದಿನಾಂಕ: 13.07.2020
7. ಮಂಡಳಿ ಠರಾವು ಸಂಖ್ಯೆ: 10204 ದಿನಾಂಕ:05-01-2021

******

ಕೊರೋನಾ ವೈರಸ್ (ಕೋವಿಡ್-19) ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿದ್ದ ಕಾರಣದಿಂದಾಗಿ, ಕರ್ನಾಟಕ ರಾಜ್ಯ ಸರ್ಕಾರದ ಆದೇಶಗಳಂತೆ ರಾಜ್ಯಾದ್ಯಂತ ದಿನಾಂಕ: 23-03-2020 ರಿಂದ 03-05-2020 ರವರೆಗೆ ಹಾಗೂ ಬಿ.ಬಿ.ಎಂ.ಪಿ. ಪ್ರದೇಶ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಒಳಗೊಂಡಿರುವ ಬೆಂಗಳೂರು ಪ್ರದೇಶದಲ್ಲಿ ದಿನಾಂಕ:14-07-2020ರ ರಾತ್ರಿ 8.00 ಗಂಟೆಯಿಂದ 22-07-2020ರ ಬೆಳಗ್ಗೆ 5.00 ಗಂಟೆಯವರೆಗೆ 7 ದಿನಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನಾಂಕ:15-07-2020ರ ರಾತ್ರಿ 8.00 ಗಂಟೆಯಿಂದ 23-07-2020ರ ಬೆಳಗ್ಗೆ 5.00ಗಂಟೆಯವರೆಗೆ 7 ದಿನ ಪೂರ್ಣ ಪ್ರಮಾಣದ ಲಾಕ್‌ಡೌನ್ ಘೋಷಿಸಲಾಗಿರುತ್ತದೆ. ಸದರಿ ಅವಧಿಗೆ ನಿಗಮದ ಅಧಿಕಾರಿ/ನೌಕರರ ಹಾಜರಾತಿ ಪರಿಗಣಿಸುವ ಬಗ್ಗೆ ಸರ್ಕಾರವು ಉಲ್ಲೇಖ-6 ರಲ್ಲಿ ನಿಗಮದ ನಿರ್ದೇಶಕರ ಮಂಡಳಿಯು ತೀರ್ಮಾನಿಸಲು ಸೂಚಿಸಿರುತ್ತದೆ. ಅದರಂತೆ ನಿಗಮದ ನಿರ್ದೇಶಕರ ಮಂಡಳಿಯು ಮಂಡಳಿ ಠರಾವು ಸಂಖ್ಯೆ: 10204 ದಿನಾಂಕ:05-01-2021ರಲ್ಲಿ ಈ ಕೆಳಗಿನಂತೆ ತೀರ್ಮಾನಿಸಿರುತ್ತದೆ.

1. ನಿಗಮದ ಎಲ್ಲಾ ದರ್ಜೆ-3 ಮತ್ತು ದರ್ಜೆ-4 ನೌಕರರಿಗೆ ಸಂಬಂಧಿಸಿದಂತೆ ದಿನಾಂಕ: 23-03-2020 ರಿಂದ 03-05-2020 ರವರೆಗಿನ ಪೂರ್ಣ ಪ್ರಮಾಣದ ಲಾಕ್‌ಡೌನ್ ಅವಧಿಯನ್ನು "ವಿಶೇಷ ರಜೆ" ಎಂದು ಪರಿಗಣಿಸುವುದು.

2. ಬಿ.ಬಿ.ಎಂ.ಪಿ. ಪ್ರದೇಶ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಒಳಗೊಂಡಿರುವ ಬೆಂಗಳೂರು ಪ್ರದೇಶದಲ್ಲಿ ದಿನಾಂಕ:14-07-2020ರ ರಾತ್ರಿ 8.00 ಗಂಟೆಯಿಂದ 22-07-2020ರ ಬೆಳಗ್ಗೆ 5.00 ಗಂಟೆಯವರೆಗೆ 7 ದಿನಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನಾಂಕ:15-07-2020ರ ರಾತ್ರಿ 8.00 ಗಂಟೆಯಿಂದ 23-07-2020ರ ಬೆಳಗ್ಗೆ 5.00 ಗಂಟೆಯವರೆಗೆ 7 ದಿನಗಳ ಪೂರ್ಣ ಪ್ರಮಾಣದ ಲಾಕ್‌ಡೌನ್ ಅವಧಿಯನ್ನು ಸದರಿ ಪ್ರದೇಶದ ವ್ಯಾಪ್ತಿಯ ನಿಗಮದ ಕಚೇರಿಗಳ ಎಲ್ಲಾ ಅಧಿಕಾರಿ/ನೌಕರರಿಗೆ ಸಂಬಂಧಿಸಿದಂತೆ **"ವಿಶೇಷ ರಜೆ"** ಎಂದು ಪರಿಗಣಿಸುವುದು.

..02

೩. ವಿಶೇಷ ರಜೆ ಅವಧಿಯನ್ನು ಈ ಕೆಳಗಿನಂತೆ ಪರಿಗಣಿಸುವುದು:

ಅ) ಈ ವಿಶೇಷ ರಜೆಗೆ ನೌಕರರು ವೇತನಕ್ಕೆ ಹಾಗೂ ತರಬೇತಿ ಅಭ್ಯರ್ಥಿಗಳು ತರಬೇತಿ ಭತ್ಯೆಗೆ ಅರ್ಹರಿರುತ್ತಾರೆ.

ಆ) ಲಾಕ್‌ಡೌನ್ ಪೂರ್ವದಲ್ಲಿ ಅನಧಿಕೃತ ಗೈರುಹಾಜರಿ ವರದಿಯಾಗಿದ್ದು, ಗೈರುಹಾಜರಿಯಲ್ಲಿ ಮುಂದುವರೆದ ನೌಕರರ ಪ್ರಕರಣಗಳಿಗೆ ಸದರಿ ವಿಶೇಷ ರಜೆ ಅನ್ವಯಿಸುವುದಿಲ್ಲ.

ಇ) ಲಾಕ್‌ಡೌನ್ ಪೂರ್ವದಲ್ಲಿ ದೀರ್ಘಾವಧಿ ರಜೆ ಮಂಜೂರಾಗಿದ್ದು, ರಜಾ ಅವಧಿಯು ಲಾಕ್‌ಡೌನ್ ಅವಧಿಯ ವ್ಯಾಪ್ತಿಗೊಳಪಟ್ಟ ಪ್ರಕರಣಗಳಲ್ಲಿ, ಅಂತಹ ಮಂಜೂರಾದ ರಜೆಯ ಅವಧಿಯನ್ನು ಹೊರತುಪಡಿಸಿ ಉಳಿದ ಲಾಕ್‌ಡೌನ್ ಅವಧಿಯನ್ನು ಮಾತ್ರ ವಿಶೇಷ ರಜೆ ಎಂದು ಪರಿಗಣಿಸುವುದು.

ಈ) ತರಬೇತಿ ಅಭ್ಯರ್ಥಿಗಳಿಗೆ ಲಾಕ್‌ಡೌನ್ ವಿಶೇಷ ರಜೆ ಅವಧಿಯನ್ನು ತರಬೇತಿ ಅವಧಿಯ ಭಾಗವನ್ನಾಗಿ ಪರಿಗಣಿಸುವುದು. (ದೀರ್ಘಾವಧಿ ಗೈರುಹಾಜರಿ ಪ್ರಕರಣಗಳನ್ನು ಹೊರತುಪಡಿಸಿ)

ಉ) ಪರೀಕ್ಷಾರ್ಥ ಮೇಲಿನ ನೌಕರರಿಗೆ ಲಾಕ್‌ಡೌನ್ ವಿಶೇಷ ರಜೆ ಅವಧಿಯನ್ನು ಪರೀಕ್ಷಾರ್ಥ ಅವಧಿಯ ಭಾಗವನ್ನಾಗಿ ಪರಿಗಣಿಸುವುದು. (ದೀರ್ಘಾವಧಿ ಗೈರುಹಾಜರಿ ಪ್ರಕರಣಗಳನ್ನು ಹೊರತುಪಡಿಸಿ)

ಊ) ವಿಶೇಷ ರಜೆ ಅವಧಿಯನ್ನು ಗಳಿಕೆ ರಜೆ ಲೆಕ್ಕಾಚಾರಕ್ಕೆ ಪರಿಗಣಿಸುವಂತಿಲ್ಲ. ಉಳಿದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ರಜಾ ನಿಯಮಗಳು-1964 ರಲ್ಲಿನ ನಿಯಮಗಳು ಅನ್ವಯವಾಗುತ್ತವೆ.

ಸಂಬಂಧಪಟ್ಟವರೆಲ್ಲರೂ ಮೇಲಿನ ನಿರ್ದೇಶನಗಳನ್ನು ತಪ್ಪದೇ ಪಾಲಿಸುವುದು ಹಾಗೂ ಈ ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿಯನ್ನು ಕಳುಹಿಸುವುದು.

(ಶಿವಯೋಗಿ ಸಿ. ಕಳಸದ., ಭಾ.ಆ.ಸೇ.)
ವ್ಯವಸ್ಥಾಪಕ ನಿರ್ದೇಶಕರು

## ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:ಕೇಂದ್ರ ಕಛೇರಿ: ಕಲಬುರಗಿ

ಸಂ:ಈಕರಸಾ/ಕೇಕ/ಸಿಬ್ಬಂದಿ/ಆಡಳಿತ/ಆ4/2299/2020-21 ದಿನಾಂಕ: 22/02/2021.

"ಕರಾರಸಾ ನಿಗಮದಿಂದ ಹೊರಡಿಸಲಾದ ಸುತ್ತೋಲೆ ಸಂಖ್ಯೆ 1685 ದಿನಾಂಕ:06/02/2021 ರಲ್ಲಿನ ಕ್ರಮ ಸಂಖ್ಯೆ (2) ರಲ್ಲಿಯ ನಿರ್ದೇಶನ ಹೊರತುಪಡಿಸಿ, ಸದರಿ ಸುತ್ತೋಲೆಯನ್ನು ಈಕರಸಾ ಸಂಸ್ಥೆಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕ ರವರು ಆದೇಶಿಸಿರುತ್ತಾರೆ." ಸಂಬಂಧಪಟ್ಟವರು ಸದರಿ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನು ಪಾಲಿಸಲು ಕೋರಲಾಗಿದೆ.

22/2/21
ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು

ಪ್ರತಿಯನ್ನು ವಂದನೆಗಳೊಂದಿಗೆ:-

- ✓ ಎಲ್ಲಾ ಇಲಾಖಾ ಮುಖ್ಯಸ್ಥರು, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ಮಾಹಿತಿಗಾಗಿ.
- ✓ ಮುಖ್ಯ ಗಣಕ ವ್ಯವಸ್ಥಾಪಕರು, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ಮಾಹಿತಿಗಾಗಿ ಹಾಗೂ ಸದರಿ ಸುತ್ತೋಲೆಯನ್ನು ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
- ✓ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಈಕರಸಾ ಸಂಸ್ಥೆ, ಕಲಬುರಗಿ ವಿಭಾಗ-1 ರವರ ಮಾಹಿತಿಗಾಗಿ.

ಪ್ರತಿಯನ್ನು:-

- ✓ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು/ಕಾರ್ಯ ವ್ಯವಸ್ಥಾಪಕರು/ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಪ್ರಾಂಶುಪಾಲರು, ಈಕರಸಾ ಸಂಸ್ಥೆ ರವರ ಮಾಹಿತಿಗಾಗಿ.
- ✓ ಮಾನ್ಯ ಅಧ್ಯಕ್ಷರು, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ವಿಶೇಷ ಕರ್ತವ್ಯಾಧಿಕಾರಿ ರವರ ಮಾಹಿತಿಗಾಗಿ.
- ✓ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಈಕರಸಾ ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ಆಪ್ತ ಸಹಾಯಕ ರವರ ಮಾಹಿತಿಗಾಗಿ.